

ಫಕೀರ್ ಮುಹಮ್ಮದ್ ಕಟ್ಪಾಡಿ

# ದೇಸಿ ಧ್ಯಾನ

**ನಮ್ಮ** ನಡುವಿನ ಪ್ರಮುಖ ಚಿಂತಕ–ವಿಮರ್ಶಕರಲ್ಲಿ ಡಾ. ರಹಮತ್ ತರೀಕೆರೆ ಒಬ್ಬರು. ರಹಮತ್ ಕನ್ನಡದ ವಿಮರ್ಶಾ ಪರಂಪರೆಯನ್ನು ಹೊಸ ನೆಲೆಯಲ್ಲಿ ವಿಸ್ತರಿಸುತ್ತಿದ್ದಾರೆ. ಕರ್ನಾಟಕದಾದ್ಯಂತ ತಿರುಗಾಡಿ ಜನಸಾಮಾನ್ಯರ ಬದುಕಿನ ತಳಮಳಗಳನ್ನು, ಜೀವಸೆಲೆಯನ್ನು ಗುರುತಿಸುತ್ತಾ, ಅದಕ್ಕೆ ಅಕ್ಷರ ರೂಪ ನೀಡುತ್ತಿದ್ದಾರೆ. ಅಕಾಡೆಮಿಕ್ ಭಾಷೆಯನ್ನು ಸಾಮಾನ್ಯರ ಭಾಷೆಯಾಗಿ ಹುರಿಗೊಳಿಸಿಕೊಂಡು ಬರೆಯುತ್ತಿದ್ದಾರೆ.

ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿರುವ ರಹಮತ್, ಮರದೊಳಗಣ ಕಿಚ್ಚು, ಪ್ರತಿ ಸಂಸ್ಕೃತಿ, ಕರ್ನಾಟಕದ ಸೂಫಿಗಳು, ಅಂಡಮಾನ್ ಕನಸು, ಕರ್ನಾಟಕದ ನಾಥಪಂಥ, ವಸಾಹತು ಪ್ರಜ್ಞೆ ಮತ್ತು ವಿಮೋಚನೆ ಮುಂತಾದ ಮಹತ್ವದ ಕೃತಿಗಳನ್ನು ನೀಡಿದ್ದಾರೆ. ವಿಮರ್ಶೆ ಹಾಗೂ ಸಾಂಸ್ಕೃತಿಕ ಚಿಂತನೆಯಲ್ಲಿ ಹೆಚ್ಚಾಗಿ ತೊಡಗಿಸಿಕೊಂಡಿರುವ ಅವರ ಆಲೋಚನಾ ಕ್ರಮ ದೇಸಿ ಚಿಂತನೆಗೆ ಕಸುವು ತುಂಬಿದೆ.

ಇದೀಗ 'ಕತ್ತಿಯಂಚಿನ ದಾರಿ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿರುವ ರಹಮತ್‌ರು ನಾಡಿನ ಉದ್ದಗಲಕ್ಕೂ ಅಪಾರ ಶಿಷ್ಯ ಬಳಗವನ್ನು ಹೊಂದಿದ್ದಾರೆ. ಹೊಸ ತಲೆಮಾರಿನ ಲೇಖಕರಿಗೆ ಪ್ರೇರಕಶಕ್ತಿಯಾಗಿದ್ದಾರೆ. ಪ್ರಶಸ್ತಿ ಸಂದ ಈ ಸಂದರ್ಭದಲ್ಲಿ ಸಹೃದಯಿ ಓದುಗರ ಪರವಾಗಿ ರಹಮತ್ ಅವರಿಗೆ 'ಮಯೂರ'ದಿಂದ ಅಭಿನಂದನೆಗಳು.

–ಸಂಪಾದಕ